# ಭಕ್ತಿ – ವಿರಕ್ತಿ

ಪುಷ್ಪಾ ಶೇಷಾದ್ರಿ

ಭಗವಂತನನ್ನು ಸಮೀಪಿಸಲು ಅನೇಕ ಮಾರ್ಗಗಳಿವೆ; ಆದರೆ ಎಲ್ಲವೂ ಒಂದೇ ರೀತಿಯಲ್ಲಿಲ್ಲ. ಅವುಗಳಲ್ಲಿ ಎಲ್ಲರಿಗೂ ಅತ್ಯಂತ ಸುಲಭವೂ, ಸಹಜವೂ ಆದ ಮಾರ್ಗವೇ ಭಕ್ತಿಮಾರ್ಗ. ವಿವಿಧ ಬಗೆಯ ಸ್ವಭಾವದ ಜನರಿಗೆ ಸರ್ವೇಸಾಮಾನ್ಯವಾದ ಭಾವನೆಗಳನ್ನು ಭಕ್ತಿಯನ್ನಾಗಿ ಪರಿವರ್ತಿಸುವ ಮೂಲಕ ಅದು ಭಗವಂತನ ಕೃಪೆಯನ್ನು ಹೊಂದಲು ಕಾರಣವಾಗುವುದು. ಈ ಕುರಿತ ಕೆಲವು ವಿಚಾರಗಳನ್ನು ಇಲ್ಲಿ ವಿವರಿಸಲಾಗಿದೆ. ಲೇಖಕಿ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು ; ಈ ಪತ್ರಿಕೆಯಲ್ಲಿ ಅವರು ಅನೇಕ ಲೇಖನಗಳನ್ನು ಬರೆದಿದ್ದಾರೆ.

**ಈ**ಗಿನ ಕಾಲದಲ್ಲಿ ಹಣ ಒಂದಿದ್ದರೆ, ಏನೆಲ್ಲವನ್ನೂ ಪಡೆಯಬಹುದು. ಆದರೆ ಭಕ್ತಿ ವಿಷಯದಲ್ಲಿ ಹಾಗಲ್ಲ. ಸ್ವ-ಪ್ರಯತ್ನದಿಂದಲೇ ಅದು ಸಾಧ್ಯ.

ಜೀವನದಲ್ಲಿ ಎಲ್ಲವೂ ಸುಸೂತ್ರವಾಗಿ ನಡೆಯುತ್ತಿದ್ದರೆ, ಭಕ್ತಿಯ ಕಡೆ ನಮಗೆ ಗಮನವೇ ಇರದು. ಸಂಸಾರವನ್ನು ಸಾಗರಕ್ಕೆ ಹೋಲಿಸುವರು. ಅಂದರೆ, ಅದರಲ್ಲಿ ಅಲೆಗಳ ಏರಿಳಿತಗಳು ಇರುವುದೆಂದು. ಅಂತೆಯೇ ಜೀವನದಲ್ಲಿ ಕಷ್ಟ-ಸುಖ, ನಷ್ಟ, ಮಾನ, ಅಪಮಾನ, ಸುಖ, ದುಃಖ; ಮತ್ತೆ ಮನಸ್ಸಿಗೆ, ದೇಹಕ್ಕೆ ನೋವುಗಳು, ಇತ್ಯಾದಿ. ಶ್ರೀಮಾತೆ ಶಾರದಾದೇವಿಯವರು, ''ಜೀವನದಲ್ಲಿ ಕಷ್ಟ, ಸುಖಗಳು ಸೇತುವೆಯ ಕೆಳಗೆ ನೀರು ಹರಿದು ಹೋಗುವಂತೆ, ಬಂದು ಹೋಗುತ್ತವೆ'' ಎಂದಿದ್ದಾರೆ. ಸೇತುವೆಯು ನೀರಿನ ಮೇಲೆ ಇರುವುದರಿಂದ, ನೀರಿನ ಪ್ರವಾಹಕ್ಕೆ ಕೊಚ್ಚಿಕೊಂಡು ಹೋಗುವುದಿಲ್ಲ, ಗಟ್ಟಿಯಾಗಿ ನಿಂತಿರುತ್ತದೆ. ಹಾಗೆಯೇ ಮಾನವನು ಕಷ್ಟ-ಸುಖಗಳನ್ನು ಮೀರಿ ನಿಲ್ಲಬೇಕು. ಹೀಗೆ ಮನಸ್ಸನ್ನು ಹಿಡಿತದಲ್ಲಿಡಬೇಕಾದರೆ, ಭಕ್ತಿಯ ಕಡೆಗೆ ತಿರುಗಬೇಕು. ಅದು ಒಮ್ಮಿಂದೊಮ್ಮೆಗೆ ಬರುವುದಿಲ್ಲ. ದಿನನಿತ್ಯದ ಜೀವನದಲ್ಲಿ ಅದನ್ನು ಅಳವಡಿಸಿಕೊಳ್ಳಬೇಕು. ಗೀತೆಯಲ್ಲಿ ಹೇಳುವಂತೆ, ಇದು ಅಭ್ಯಾಸ-ಯೋಗವಾಗಬೇಕು.

ಭಕ್ತಿ ಬರಬೇಕಾದರೆ, ಮೊದಲು ದೇವರಲ್ಲಿ ನಂಬಿಕೆ ಇರಬೇಕು.

ವಾಮನನು, ''ನನಗೆ ಮೂರು ಪಾದಗಳಿಗೆ ಸ್ಥಳ ಕೊಡು'' ಎಂದು ಬಲಿಯನ್ನು ಕೇಳುತ್ತಾನೆ. ಇದರ ಸಂಕೇತವೇನೆಂದರೆ, ದಿನನಿತ್ಯ ಕೇವಲ ಮೂರು ನಿಮಿಷಗಳನ್ನು ಮಾತ್ರ ನನಗೆ ಮೀಸಲಿಡು, ಪೂರ್ತಿ ಸಮಯವನ್ನಲ್ಲ. ಕೇವಲ ಮೂರು ಸಲ 'ರಾಮ, ರಾಮ, ರಾಮ' ಎಂದು ಭಕ್ತಿಯಿಂದ ಹೇಳಿದರೆ ಸಾಕು. ಅದು ಬರಬೇಕಾದರೆ, ಮನಸ್ಸಿನ ಪವಿತ್ರತೆ, ಏಕಾಗ್ರತೆ, ದೇವರ ನಾಮದಲ್ಲಿ ದೃಢನಂಬಿಕೆ ಇರಬೇಕು. ಅನಂತರ ಅದು ಭಕ್ತಿಯ ಭಾವವಾಗುವುದರಲ್ಲಿ ಸಂದೇಹವಿಲ್ಲ.

### ಈ ಕಲಿಯುಗದಲ್ಲಿ ಭಕ್ತಿ ಮಾರ್ಗ ಒಂದೇ ದಾರಿ

'ಕಲಿಯುಗದಲಿ ಹರಿನಾಮವ ನೆನೆದರೆ, ಕುಲಕೋಟಿಗಳುದ್ಧರಿಸುವವೋ ರಂಗ' ಎಂದು ಪುರಂದರದಾಸರು ಹಾಡಿ ಹೊಗಳಿದ್ದಾರೆ.

ಒಮ್ಮೆ ಸಂತ ತುಕಾರಾಮನು ಒಂದು ನಿರ್ಮಲವಾದ ಸ್ಥಳದಲ್ಲಿ ಕುಳಿತು, ದೇವರ ನಾಮವನ್ನು ಜಪಿಸುತ್ತಿದ್ದನು. ಹೀಗಿರುವಾಗ, ಒಮ್ಮೆ ದೇವರು ಋದ್ಧಿ-ಸಿದ್ಧಿ ಎಂಬುವರನ್ನು ತುಕಾರಾಮನ ಬಳಿ ಕಳುಹಿಸಿ ಅವನಿಗೆ ಬೇಕಾದ ಹಾಗೆ ಸಂಪತ್ತು, ಅಸಮಾನವಾದ ಶಕ್ತಿ, ಮುಕ್ತಿಯನ್ನು ಕರುಣಿಸುವಂತೆ ತಿಳಿಸಿದನು. ಅದರಂತೆ ಅವರಿಬ್ಬರೂ ತುಕಾರಾಮನ ಬಳಿ ಬಂದು, ''ದೇವರು, ನಮ್ಮನ್ನು ನಿನ್ನ ಬಳಿ ಕಳುಹಿಸಿ, ನಿನಗೆ ಬೇಕಾದ



ವರವನ್ನು ಅನುಗ್ರಹಿಸುವಂತೆ ಆದೇಶಿಸಿರುವನು. ನಿನಗೇನು ಬೇಕೋ ಕೇಳು'' ಎಂದರು.

ಅದಕ್ಕೆ ತುಕಾರಾಮ ''ಅಯ್ಯೋ! ನಾನು ಇಲ್ಲಿ ಏಕಾಗ್ರತೆಯಿಂದ, ಭಕ್ತಿಯಿಂದ ದೇವರ ಧ್ಯಾನ ಮಾಡುತ್ತಿರಬೇಕಾದರೆ, ಇವರು ಬಂದು ನನಗೆ ಭಂಗ ಮಾಡುತ್ತಿರುವರಲ್ಲಾ!'' ಎಂದು ಅವರನ್ನು ವಾಪಸ್ಸು ಕಳುಹಿಸಿದ.

ಆದರೆ ದೇವರು ಇವರಿಬ್ಬರನ್ನು ಮತ್ತೆ ತುಕಾರಾಮನ ಬಳಿ ಹೋಗುವಂತೆ, ಆದೇಶ ಮಾಡಿದ. ದೇವರ ಆದೇಶದಂತೆ, ಋದ್ಧಿ ಮತ್ತು ಸಿದ್ಧಿ ಮತ್ತೆ ತುಕಾರಾಮನ ಬಳಿ ಬಂದು, ''ಪುನಃ ದೇವರು ಆಜ್ಞೆ ಮಾಡಿದ್ದಾನೆ, ಅದರಂತೆ ನಾವು ಬಂದಿರುವೆವು'' ಎಂದರು. ಆಗ ತುಕಾರಾಮನಿಗೆ ತುಸು ಕೋಪವೇ ಬಂದಿತು. ''ದೇವರು ನನಗೆ ಏನನ್ನಾದರೂ ವರ ಕೊಡಬೇಕೆಂದು ನಿಮ್ಮನ್ನು ಕಳುಹಿಸಿರುವನು ಅಲ್ಲವೆ? ಈಗ ನಾನು ಹೇಳುವುದೇನೆಂದರೆ, (ಕೈ ಜೋಡಿಸಿ) ಈಗ ದಯವಿಟ್ಟು, ನೀವಿಬ್ಬರೂ ಹಿಂತಿರುಗಿ ಹೋಗಿ; ಮತ್ತೆ ಬರಬೇಡಿ. ವರವಾದರೂ ಸರಿ, ಏನಾದರೂ ಸರಿ, ನನಗದು ಬೇಕಿಲ್ಲ. ನಾನು ಭಕ್ತಿಯಿಂದ ದೇವರ ನಾಮವನ್ನು ಜಪ ಮಾಡುವುದಕ್ಕೆ ಭಂಗಪಡಿಸಬೇಡಿ'' ಎಂದು ಹಿಂತಿರುಗಿ ಕಳುಹಿಸಿದ.

ಅಂತಹ ಪರಮಭಕ್ತರನ್ನು 'ವೈಷ್ಣವ ಭಕ್ತ'ರೆನ್ನುವರು. ಇದು ಭಕ್ತಿಯ ಪರಾಕಾಷ್ಠೆ.

ಶ್ರೀರಾಮಕೃಷ್ಣ ಪರಮಹಂಸರ ಜೀವನದ ಘಟನೆಗಳನ್ನು ನೆನೆದರೆ, ಅವರ ಭಕ್ತಿ ಎಷ್ಟು ಉನ್ನತ ಮಟ್ಟದ್ದು ಎಂದು ತಿಳಿಯಬಹುದು. ಕಾಳೀಮಾತೆಯ ದೇವಸ್ಥಾನದ ಪೂಜೆಗಾಗಿ ಪರಮಹಂಸರನ್ನು ನೇಮಿಸಿದ್ದೇ ಅತಿ ಉನ್ನತ ಮಾರ್ಗವಾಯಿತು.

ಅವರು ಪ್ರತಿದಿನ ನಿಷ್ಠೆಯಿಂದ ದೇವಿಯ ಪೂಜೆ, ಆರಾಧನೆ ಮಾಡುತ್ತಾ ಬಂದರು. ಹೀಗೆ ದಿನಗಳು, ವರುಷಗಳು ಕಳೆದರೂ, ತನ್ನ ಪೂಜೆಗೆ ಓಗೊಡದ ಮಾತೆಯ ಮೇಲೆ ಬಹಳವೇ ಕೋಪ ಬಂತು. ಕೊನೆಗೆ ಒಂದು ದಿನ, ''ಅಮ್ಮಾ ನೀನು, ನನ್ನ ಪೂಜೆ ಸ್ವೀಕರಿಸದೆ, ನನಗೆ ದರುಶನ ಕೊಡದಿದ್ದರೆ, ನಾನು ಬದುಕಿದ್ದು ಸಾರ್ಥಕವೇನು? ಇನ್ನು ನೀನು ದರುಶನ ಕೊಡದಿದ್ದರೆ, ಇಂದೇ ನನ್ನ ಜೀವನವನ್ನು ನಿನ್ನ ಪಾದಗಳಲ್ಲಿ ಅರ್ಪಿಸುವೆ'' ಎಂದು, ಸ್ವಲ್ಪವೂ ಅಂಜದೆ, ಹಿಂಜರಿಯದೆ, ದೇವಿಯ ಕೈಯಲ್ಲಿದ್ದ ಖಡ್ಗವನ್ನು ತೆಗೆದುಕೊಂಡು, ತನ್ನ ಕತ್ತನ್ನೇ ಕತ್ತರಿಸಿಕೊಳ್ಳುವ ಧೈರ್ಯ ಮಾಡಿದರು. ಆಗ, ಇನ್ನು ಭಕ್ತನ ಭಕ್ತಿಯನ್ನು ಪರೀಕ್ಷಿಸಬಾರದೆಂದು ದೇವಿಯು ಶ್ರೀರಾಮಕೃಷ್ಣರಿಗೆ ದರುಶನವಿತ್ತಳು.

ಪರಮಹಂಸರಿಗೆ ಯಾವ ರೀತಿ ಬೇಕೆಂದರೆ ಆ ರೀತಿಯಲ್ಲಿ ದರುಶನವಿತ್ತಳು, ಆ ಮಹಾತಾಯಿ.

ಅಬ್ಬಾ!! ಈ ಘಟನೆಯನ್ನು ನೆನೆದರೆ ಸಾಕು, ಪರಮಹಂಸರ ಉನ್ನತ ಭಕ್ತಿ ಎಷ್ಟಿತ್ತೆಂದು ಊಹಿಸಬಹುದು.

ಇನ್ನು ಮೀರಾಬಾಯಿ. ರಾಣಾ ಮಹಾರಾಜನ ಅರಮನೆಯಲ್ಲಿ ಯಾವುದಕ್ಕೂ ಕೊರತೆಯಿಲ್ಲ. ಎಷ್ಟು ವೈಭವವಿದ್ದರೂ ಎಲ್ಲವನ್ನೂ ತ್ಯಜಿಸಿ, ಕೃಷ್ಣನಿಗಾಗಿ ಅರಮನೆಯನ್ನೇ ತೊರೆದು, 'ಜೋ ತುಮ್ ತೋಡೋ ಪಿಯಾ, ಮೈ ನಹಿ ತೋಡೂಂ'' ಎಂದು ಕಾಡಿನಲ್ಲಿ ಅಲೆದಾಡಿ, ಕೊನೆಗೆ ಭಕ್ತಿಯಿಂದಲೇ ಕೃಷ್ಣನಲ್ಲಿ ಲೀನವಾದಳು.

ಭಕ್ತೆ ಶಬರಿ, ಏನೂ ಅರಿಯದ ಮುಗ್ಧೆ. ಅವಳ ಮದುವೆಗೆ ಎಲ್ಲಾ ಅಣಿಮಾಡಿ ಆಕೆಯನ್ನು ಅಲಂಕರಿಸಿ, ಇನ್ನೇನು ಮದುವೆಯ ಮಂಟಪಕ್ಕೆ ಹೋಗಬೇಕೆಂದಾಗ, ಆಕೆ ಕಿಟಕಿಯಿಂದ ಹೊರಗೆ ನೋಡಿದಾಗ, ಸಾಲಾಗಿ ಕುರಿಗಳನ್ನು ಬಲವಂತವಾಗಿ ಎಳೆದುಕೊಂಡು ಹೋಗುತ್ತಿದ್ದುದನ್ನು ಕಂಡಳು. ಅವುಗಳ ಆಕ್ರಂದನ ಇವಳಿಗೆ ಅರ್ಥವಾಗಲಿಲ್ಲ. ''ಏಕೆ ಕುರಿಗಳನ್ನು ಬಲವಂತವಾಗಿ ಎಳೆದುಕೊಂಡು ಹೋಗುತ್ತಿರುವರಲ್ಲಾ'' ಎಂದು ಕೇಳಿದಾಗ, ''ಇಂದು ನಿನ್ನ ಮದುವೆ, ಕುರಿಗಳನ್ನು ಕೊಂದು, ನಿನ್ನ ಮದುವೆಯ ಔತಣಕ್ಕೆ ಉಪಯೋಗಿಸುವರು'' ಎಂದು ತಿಳಿದು ಬಂತು. ಶಬರಿಗೆ ದಿಗ್ಭ್ರಮೆಯಾಯಿತು.

''ಏನಿದು, ನನ್ನ ಮದುವೆಯಿಂದಾಗಿ ಇವುಗಳನ್ನು ವಧೆ ಮಾಡುವುದೆ?... ನನಗೀ ಮದುವೆಯೇ ಬೇಡ, ಆ ಪಾಪವನ್ನು ಮಾಡಲು ನಾನು ಒಪ್ಪುವುದಿಲ್ಲ. ಇಲ್ಲದಿದ್ದರೆ ನನ್ನನ್ನು ಬಲವಂತ ಮಾಡುವರು'' ಎಂದು, ಯಾರಿಗೂ ಹೇಳದೆ, ತನ್ನ ಮದುವೆಯ ಅಲಂಕಾರವನ್ನೆಲ್ಲಾ ತೆಗೆದು, ಯಾರಿಗೂ ತಿಳಿಸದೆ ಮನೆ ಬಿಟ್ಟು ಓಡಿ ಹೋದಳು.

ಹೀಗೆ ಅಲೆದಲೆದು, ನಂತರ ಕಾಡಿನಲ್ಲಿ ಒಬ್ಬ ಋಷಿಯ ಕುಟೀರವನ್ನು ತಲುಪಿದಳು. ತನ್ನ ವಿಷಯವನ್ನೆಲ್ಲ ಋಷಿಮುನಿಗಳಿಗೆ ತಿಳಿಸಿ, ''ನನಗೆ ಸರಿಯಾದ ಮಾರ್ಗ ತೋರಿಸಿ ಗುರುಗಳೇ'' ಎಂದಾಗ, ಅವರು ಈ ರೀತಿ ಉಪದೇಶಿಸಿದರು:

''ಮುಂದೆ ಶ್ರೀರಾಮನು ವನವಾಸದಲ್ಲಿರುವಾಗ, ಇದೇ ಮಾರ್ಗವಾಗಿ ಬರುವನು. ಅವನ ಬರುವಿಕೆಗಾಗಿ ಕಾದು, ನಿನ್ನ ಭಕ್ತಿಯನ್ನು ಅವನಲ್ಲಿ ಅರ್ಪಿಸಿ ಋಣಮುಕ್ತಳಾಗು'' ಎಂದು ಅವರು ಆಶೀರ್ವದಿಸಿದರು.

ಅವರ ಉಪದೇಶದಂತೆ, ಕಾಡಿನಲ್ಲಿ ಅಲೆದಾಡುತ್ತ ತನ್ನದೇ ಆದ ಒಂದು ಕುಟೀರವನ್ನು ಮಾಡಿ, ರಾಮ ಬರುವನೆಂದು ಪ್ರತಿದಿನ ಕಾಡಿನೊಳಗೆ ಹೋಗಿ, ವಿಧವಿಧವಾದ ಹಣ್ಣು, ಹೂವುಗಳನ್ನು ಬುಟ್ಟಿಯಲ್ಲಿ ತಂದು ಶ್ರೀರಾಮನಿಗಾಗಿ ಕಾಯುತ್ತಿದ್ದಳು. ತನ್ನ ಸುಖವನ್ನೆಲ್ಲಾ ಬೇಸರವಿಲ್ಲದೆ ತ್ಯಾಗಮಾಡಿದಳು.

ತಿಂಗಳು, ವರುಷಗಳನ್ನು ಕಳೆದು, ತನ್ನ ಯೌವನವನ್ನು ದಾಟಿ, ಮಧ್ಯವಯಸ್ಸಾಗಿ, ನಂತರ ವೃದ್ಧೆಯೂ ಆದಳು. ಆದರೂ ರಾಮ ಬರಲೇ ಇಲ್ಲ.

ಕ್ರಮೇಣ, ದೇಹ ಕುಗ್ಗಿತು. ಕಣ್ಣುಗಳು ಮಂಜಾದವು. ಆದರೂ 'ಕಾದಿರುವಳು ಶಬರಿ, ರಾಮ ಬರುವನೆಂದು; ತನ್ನ ಪೂಜೆ, ಭಕ್ತಿಯನ್ನು ಖಂಡಿತ ಸ್ವೀಕರಿಸುವನು' ಎಂದು ಹಾಡುತ್ತಾ, ತನಗೆ ಮುಪ್ಪು ಬಂದಿದ್ದೂ ಸಹ ಅರಿವಾಗಲಿಲ್ಲ. ಸದಾ ರಾಮನ ಭಕ್ತಿಯಲ್ಲೇ ಮುಳುಗಿದಳು.

ಅಬ್ಬಾ!!! ಆ ಒಂದು ದಿನ ಕೊನೆಗೂ ಬಂದೇ ಬಂದಿತು. ರಾಮ-ಲಕ್ಷ್ಮಣರು ಇವಳ ಕುಟೀರದ ಕಡೆ ನಡೆದು ಬರುತ್ತಿದ್ದುದನ್ನು ಕಂಡು, ಪರಮ ಆಶ್ಚರ್ಯದಿಂದ ಹಿಗ್ಗಿದಳು. ಸಂತೋಷದ ಕಣ್ಣೀರನ್ನೇ ಸುರಿಸಿದಳು.

''ರಾಮ!!! ಬಂದೆ ಏನಪ್ಪಾ? ನಿನಗಾಗಿ ಕಾಯುತ್ತಿದ್ದೆ'' ಎಂದು ಹೇಳಿ, ಆಸನ ಕೊಟ್ಟು ಕೂರಿಸಿ, ರಾಮನ ಪಾದಗಳನ್ನು ತೊಳೆದಳು. ಅಂದು ಆರಿಸಿ ತಂದ ಬಣ್ಣ ಬಣ್ಣದ ಹೂವುಗಳನ್ನು ರಾಮನ ಪಾದದಲ್ಲಿ ಅರ್ಪಿಸಿ, ಹಣ್ಣುಗಳನ್ನು ರಾಮನಿಗೆ ತಿನ್ನಲು ಕೊಟ್ಟಳು. ಅವಳ ಭಕ್ತಿ ಎಷ್ಟು ಪವಿತ್ರವಾದುದೆಂದರೆ, ಪ್ರತಿಯೊಂದು ಹಣ್ಣನ್ನೂ ರುಚಿ ನೋಡಿ, ಚೆನ್ನಾಗಿರುವುದನ್ನು ಮಾತ್ರ ಅರ್ಪಿಸುತ್ತಿದ್ದಳು. ರಾಮನು ಅದನ್ನು ಅಷ್ಟೇ ಪ್ರೀತಿಯಿಂದ ಸ್ವೀಕರಿಸುತ್ತಿದ್ದ. ಆದರೆ ಲಕ್ಷ್ಮಣನಿಗೆ ಆಶ್ಚರ್ಯವಾಗಿ ರಾಮನನ್ನು ''ಅಣ್ಣಾ! ಇದೇನಿದು, ಅವಳು ಎಂಜಲು ಮಾಡಿ ಕೊಟ್ಟದ್ದನ್ನು ಸ್ವೀಕರಿಸುತ್ತಿರುವೆಯಲ್ಲಾ?'' ಎಂದು ತುಸು ಕೋಪದಿಂದಲೇ ಕೇಳಿದನು.

ಅದಕ್ಕೆ ರಾಮನು, ''ಲಕ್ಷ್ಮಣ! ಅವಳು ಏಕೆ ಹಾಗೆ ಮಾಡಿದಳೆಂದು ನಿನಗೆ ತಿಳಿಯದು. ಕೆಲವೊಂದು ಹಣ್ಣನ್ನು ಅಗಿದು, ಉಗಿದು ಬಿಸಾಡುತ್ತಿದ್ದಳು. ಏಕೆಂದರೆ ಹಣ್ಣುಗಳು ಹುಳಿಯಾಗಿದೆಯೋ, ಹುಳುಕಾಗಿದೆಯೋ, ಪಕ್ವವಾಗಿಲ್ಲವೋ ಮತ್ತು ರುಚಿಯಾಗಿರುವುದೋ ಎಂದು ಪರಿಶೀಲಿಸಿ, ಚೆನ್ನಾಗಿರುವುದನ್ನು ಮಾತ್ರ ನನಗೆ ಅರ್ಪಿಸುತ್ತಿದ್ದಳು. ಅವಳ ಪವಿತ್ರ ಭಕ್ತಿಗೆ ನಾನು ತಲೆಬಾಗಿದೆ. ಜೀವನವನ್ನೆಲ್ಲಾ ತ್ಯಾಗಮಾಡಿ, ನನಗಾಗಿ ಕಾದು ಇದುವರೆಗೂ ಕುಳಿತಳು. ನನ್ನ ಬರುವಿಕೆ, ದರ್ಶನಕ್ಕಾಗಿ ಹೀಗೆ ತನ್ನ ಜೀವನವನ್ನೇ ಮುಡಿಪಾಗಿಟ್ಟಳು'' ಎಂದು ರಾಮನು ಹೇಳಿದಾಗ, ಲಕ್ಷ್ಮಣನಿಗೆ ಶಬರಿಯ ಪವಿತ್ರ ಭಕ್ತಿ ಅರ್ಥವಾಯಿತು.

ರಾಮನು ಶಬರಿಯನ್ನು ಕುರಿತು, ''ದ್ವಾಪರ ಯುಗದಲ್ಲಿ ನೀನು ನನಗೆ ಸೋದರಿಯಾಗಿ ಹುಟ್ಟುವೆ, ಆಗ ನಿನಗೆ ನಾನೇ ನಿಂತು, ಪರಮ ವೀರನಾದ ಯೋಧನೊಂದಿಗೆ ಮದುವೆ ಮಾಡಿಸುವೆ'' ಎಂದನು. ಮುಂದಿನ ಜನ್ಮದಲ್ಲಿ ಶಬರಿಯೇ ಸುಭದ್ರೆಯಾಗಿ ಜನಿಸಿ, ಕೃಷ್ಣನ ಸಮ್ಮುಖದಲ್ಲಿ ಅರ್ಜುನನನ್ನು ಮದುವೆಯಾಗುವಳು.

ದೇವರು ಭಕ್ತರ ದಾಸಾನುದಾಸ ಎಂದು ಪುರಂದರದಾಸರು ಹಾಡಿ ತೋರಿಸಿದ್ದಾರೆ. ನಮ್ಮ ಭಕ್ತಿ ಪವಿತ್ರವಾಗಿದ್ದರೆ, ದೇವರು ಖಂಡಿತವಾಗಿ ನಮ್ಮನ್ನು ಕೈಹಿಡಿದೆತ್ತುವನು.

ಹೀಗೆ ಭಕ್ತಿಯಿಂದ ವಿರಕ್ತಿ, ವಿರಕ್ತಿಯಿಂದ ವೈರಾಗ್ಯ. ವೈರಾಗ್ಯದಿಂದ ಶರಣಾಗತಿಗೆ ಮಾರ್ಗವಾಗುವುದು.

### ವಿವಿಧ ಭಕ್ತಿಯ ಮಾರ್ಗ

ಆಹಾರದಲ್ಲಿ ಭಕ್ತಿಯುಂಟಾದರೆ... ಅದು ಪ್ರಸಾದವಾಗುವುದು

ಹಸಿವೆಯಲ್ಲಿ ಭಕ್ತಿಯುಂಟಾದರೆ...ಅದು ಉಪವಾಸವಾಗುವುದು

ನೀರಿನಲ್ಲಿ ಭಕ್ತಿಯುಂಟಾದಾಗ... ಅದು ತೀರ್ಥವಾಗುವುದು

ಯಾತ್ರೆಗಳಲ್ಲಿ ಭಕ್ತಿಯುಂಟಾದಾಗ... ಅದು ತೀರ್ಥಯಾತ್ರೆಯಾಗುವುದು

ಸಂಗೀತದಲ್ಲಿ ಭಕ್ತಿಯುಂಟಾದಾಗ...ಅದು ಕೀರ್ತನೆಯಾಗುವುದು

ಮನೆಯಲ್ಲಿ ಭಕ್ತಿಯುಂಟಾದಾಗ..ಅದು ದೇವಸ್ಥಾನವಾಗುವುದು

ಕರ್ಮದಲ್ಲಿ ಭಕ್ತಿಯುಂಟಾದಾಗ...ಸೇವಾಭಾವವಾಗುವುದು

ಕಾರ್ಯದಲ್ಲಿ ಭಕ್ತಿಯುಂಟಾದಾಗ..ಅದು ಕರ್ಮವಾಗುವುದು

''ಮಾನವ ಜನ್ಮ ದೊಡ್ಡದು, ಅದನ್ನು ಹಾನಿಮಾಡಲುಬೇಡಿ ಹುಚ್ಚಪ್ಪಗಳಿರಾ'' ಎಂದು ಪುರಂದರದಾಸರು ಹಾಡಿ ತೋರಿಸಿದ್ದಾರೆ.

ಅಂತೆಯೇ, ನಮಗೆ ಈ ಮಾನವ ಜನ್ಮ ಬಂದಿರುವುದು ಒಂದು ಪುಣ್ಯ. ಪ್ರಾಣಿ, ಪಶು, ಪಕ್ಷಿಗಳನ್ನು ನೋಡಿದಾಗ, ನಾವೆಷ್ಟು ಪುಣ್ಯವಂತರು ಎಂದು ತಿಳಿಯಬೇಕು. ನಮಗೆ 'ವಿವೇಕ'ವೆಂಬ ಅಮೂಲ್ಯವಾದ ಶಕ್ತಿಯನ್ನು ದೇವರು ಕರುಣಿಸಿದ್ದಾನೆ. ಅದನ್ನು ಹಾನಿಗಾಗಿ ಬೇಕಾದರೂ ಬಳಸಬಹುದು, ಅಥವಾ ಉತ್ತಮರಾಗುವ ಮಾರ್ಗವನ್ನಾದರೂ ಮಾಡಿಕೊಂಡು ಅನುಸರಿಸಬಹುದು.

ಅದಕ್ಕೆ ಭಕ್ತಿಮಾರ್ಗ ಒಂದು ದಾರಿ. ✿

ಒಬ್ಬ ಬರುತ್ತಾನೆ; ಅವನ ಪಾಂಡಿತ್ಯ ಅಗಾಧ, ಭಾಷೆ ಸುಂದರ; ನಿಮ್ಮ ಜತೆ ಕೆಲವು ಗಂಟೆಗಳು ಮಾತಾಡುತ್ತಾನೆ. ಆದರೆ ಏನೂ ಪರಿಣಾಮ ಬೀರಲಾರ. ಇನ್ನೊಬ್ಬ ಬರುತ್ತಾನೆ; ಕೆಲವೇ ಪದಗಳನ್ನು ಹೇಳುವನು; ಏನೂ ಸುಂದರವಾಗಿ ಹೆಣೆದದ್ದಲ್ಲ, ವ್ಯಾಕರಣಬದ್ಧವೂ ಅಲ್ಲ. ಆದರೆ ಆತ ನಿಮ್ಮ ಮೇಲೆ ತೀವ್ರ ಪರಿಣಾಮ ಬೀರುತ್ತಾನೆ. ಇದನ್ನು ನಿಮ್ಮಲ್ಲಿ ಹೆಚ್ಚು ಜನ ಗಮನಿಸಿರಬಹುದು. ಆದ್ದರಿಂದ, ಬರೀ ಶಬ್ದಗಳು ಯಾವಾಗಲೂ ಪರಿಣಾಮ ಬೀರಲಾರವು ಎನ್ನುವುದು ಸತ್ಯ. ಒಟ್ಟು ಪರಿಣಾಮದಲ್ಲಿ ಪದಗಳ ಮತ್ತು ವಿಚಾರಗಳ ಪಾತ್ರ ಬರೀ ಮೂರನೇ ಒಂದಂಶದಷ್ಟು ಮಾತ್ರ ; ಮೂರನೇ ಎರಡರಷ್ಟು ಮನುಷ್ಯನದೇ, ಚುಂಬಕ ವ್ಯಕ್ತಿತ್ವ ಎಂದು ನೀವು ಹೇಳುತ್ತೀರಲ್ಲ , ಅದೇ ಆ ವ್ಯಕ್ತಿಯಿಂದ ಹೊರಹೊಮ್ಮಿ ನಿಮ್ಮ ಮೇಲೆ ಪ್ರಭಾವ ಬೀರುವುದು. — ಸ್ವಾಮಿ ವಿವೇಕಾನಂದ